## 23

# ಮಾಂತ್ರಿಕನ ಪರಿವರ್ತನೆ

## (8:5-24)

"ಮಾಂತ್ರಿಕ" ಎಂಬ ಪದವನ್ನು ನೀನು ಕೇಳಿದಾಗ ನೀನು ಏನನ್ನು ಯೋಚಿಸುತ್ತೀ? ವಸ್ತುಗಳು ಟೊಪ್ಪಿಗೆಯಿಂದ ತಳ್ಳಲ್ಪಡುವವೇ? ತೂಗುಯ್ಯಾಲೆಡುವ ಸ್ತ್ರೀಯು ಅರ್ಧದಲ್ಲಿರುವಳೇ? ವಸ್ತುಗಳು ಗೌಪ್ಯವಾಗಿ ಕಾಣಿಸುತ್ತವೆಯೋ ಮತ್ತು ಕಾಣಿಸಿದಿರುತ್ತಿವೆಯೋ? ಒಂದು ವೇಳೆ ಒಬ್ಬ ಕುಶಲವುಳ್ಳ ಮಾಂತ್ರಿಕನು ತೋರಿಸುವುದನ್ನು ನೀವು ಎಂದಾದರೂ ನೋಡಿದ್ದೀರಾ, ಅನೇಕ ಸಾರಿ ಅವರ ಮಾಯಜಾಲದಲ್ಲಿ ನಾವೂ ಕೂಡಾ ಸಿಲುಕಿಕೊಂಡಿರುತ್ತೇವೆ. ಈ ಪಾಠವು ಅನೇಕ ಆಶ್ಚರ್ಯಗಳನ್ನು ಅನುಭವಿಸಿದ ಮಾಂತ್ರಿಕನ ಬಗೆಗೆ ಇದೆ.

ನಮ್ಮ ಪಾಠದ ಶೀರ್ಷಿಕೆಯು "ಪರಿವರ್ತಿತನಾದ ಮಾಂತ್ರಿಕ" ಎಂದಿದೆ. "ಪರಿವರ್ತನೆ" ಎಂಬ ಪದದ ಅರ್ಥವು "ಬದಲಾವಣೆ" ಎಂದೇ ಆಗಿದೆ. ಒಬ್ಬನ ಜೀವಿತದಲ್ಲಿ ಅತಿ ದೊಡ್ಡ ಬದಲಾವಣೆ ಎಂದರೆ ಕ್ರೈಸ್ತನಾಗುವುದೇ ಅದು ವ್ಯಕ್ತಿಯ ಜೀವಿತದಲ್ಲಿ ಪ್ರಮುಖ ಸ್ಥಾನವನ್ನು ಪಡೆಯುತ್ತದೆ. ಅದರ ನಂತರವೂ, ಇತರ ಬದಲಾವಣೆಗಳೂ ಕೂಡಾ ಅವಶ್ಯವಿದೆ (ಲೂಕ 22:32). ಆದರಂತೆಯೇ ನಾವು ನಮ್ಮ ಪಾಠದಲ್ಲಿ ನೋಡುವಾಗ ಈ ಮಾಂತ್ರಿಕನಿಗೆ ಒಂದು ಸಾರಿಗಿಂತ ಹೆಚ್ಚಿನ ಪರಿವರ್ತನೆಯ ಸಮಸ್ಯೆಯು ಇತ್ತು.

ವರ್ಷಗಳುದ್ದಕ್ಕೂ, ಅನೇಕ ಸಂಪ್ರದಾಯಗಳು ಈ ಮನುಷ್ಯನ ವಿಷಯದಲ್ಲಿ ಉದ್ಭವಿಸಿದವು, ಆದರೆ ನಾವೆಲ್ಲರೂ ಪ್ರಾರ್ಥಮಿಕವಾಗಿ ಬೈಬಲ್ ಏನು ಹೇಳುತ್ತದೆ ಎಂಬುದರ ಬಗೆಗೆ ಆಸಕ್ತಿಯುಳ್ಳವರಾಗಿರುತ್ತೇವೆ. ನಮ್ಮ ಅಭ್ಯಾಸವು ನಾಲ್ಕು ಭಾಗಗಳಾಗಿ ವಿಭಾಗಿಸಲ್ಪಟ್ಟಿದೆ.

### ದೂರವಿರುವ ಪಾಪಿಗಳು (8:5-11)

ನಮ್ಮ ಕಥೆಯು ತೆರೆದಂತೆ, ಫಿಲಿಪ್ಪ ಎಂಬ ಸೌವಾರ್ತಿಕನು ಸಮಾರ್ಯ ಎಂಬ ಪಟ್ಟಣಕ್ಕೆ ಅವರಿಗಾಗಿ ಕ್ರಿಸ್ತನ ಬಗೆಗೆ ಮೊದಲ ಬಾರಿಗೆ ಬೋಧಿಸಲು ಹೋದನು (ವಚನ 5). ಅಪೊಸ್ತಲರು ತಮ್ಮ ಕೈಗಳನ್ನು ಅವರ ಮೇಲೆ ಇಟ್ಟರು, ಹೀಗಾಗಿ ಅವನು ಅದ್ಭುತಗಳನ್ನು ಮಾಡಲು ಸಮರ್ಥನಾದನು (ವಚನಗಳು 6-8). ಆತನು ಅದ್ಭುತಗಳನ್ನು ಮಾಡಲು ಆರಂಭಿಸಿದ್ದು ತಾನು ದೇವರಿಂದ ಬಂದವನು ಎಂಬುದನ್ನು ಸಾಧಿಸಲು. ಈ ಸಮಯದಲ್ಲಿ, ಮಾಂತ್ರಿಕನು ನಮಗೆ ಪರಿಚಯಿಸಿಲ್ಪಟ್ಟನು:

> ಆದರೆ ಕೆಲವು ಕಾಲದಿಂದ ಆ ಪಟ್ಟಣದಲ್ಲಿದ್ದ ಸೀಮೋನನೆಂಬ ಒಬ್ಬ ಮನುಷನು ತಾನು ಏನೋ ಒಬ್ಬ ಮಹಾತ್ಮನೆಂದು ಹೇಳಿಕೊಂಡು ಮಂತ್ರತಂತ್ರಗಳನ್ನು ನಡೆಸಿ ಸಮಾರ್ಯದ ಜನರಲ್ಲಿ ಬೆರಗನ್ನು ಹುಟ್ಟಿಸುತ್ತಿದ್ದನು. ಚಿಕ್ಕವರು ಮೊದಲುಗೊಂಡುದೊಡ್ಡವರ ಪರ್ಯಂತರ ಎಲ್ಲರೂ - ಇವನು ಮಹಾಶಕ್ತಿ ಎನಿಸಿಕೊಂಡಿರುವ ದೇವರ ಶಕ್ತಿಯೇ ಎಂದು ಹೇಳುತ್ತಾ ಅವನಿಗೆ ಲಕ್ಷ್ಯಕೊಡುತ್ತಿದ್ದರು. ಬಹುಕಾಲದಿಂದಲೂ ಅವನು ಮಂತ್ರತಂತ್ರಗಳನ್ನು ನಡಿಸಿ ಜನರಲ್ಲಿ ಬೆರಗನ್ನು ಹುಟ್ಟಿಸಿದ್ದ ಕಾರಣದಿಂದ ಅವರು ಅವನಿಗೆ ಲಕ್ಷ್ಯಕೊಡುತ್ತಿದ್ದರು (ವಚನಗಳು 9-11).

ನಮ್ಮ ಮಾಂತ್ರಿಕನು ಇಲ್ಲಿದ್ದಾನೆ: ಮಾಂತ್ರಿಕನಾದ ಸೀಮೋನ. ಆತನು ಕೆಲಸಾರಿ "ಮ್ಯಾಗಸ್ ಸೀಮೋನ" ಅಥವಾ ಮಾಂತ್ರಿಕನಾದ ಸೀಮೋನ ಎಂದು ಕರೆಯಲ್ಪಡುತ್ತಿದ್ದನು.

"ಮಂತ್ರಿಗಳನ್ನು ಅಭ್ಯಾಸಿಸುತ್ತಿದ್ದನು" ಎಂಬ ಪದದ ಅರ್ಥವು (ಅಥವಾ "ಮಾಟಗಳನ್ನು ಅಭ್ಯಾಸ ಮಾಡುವವನು"; KJV) ಎಂದಿದ್ದು ಇದಕ್ಕೆ ನಮ್ಮ ಸಜಾತಿ ಪದವು "ಇಂದ್ರಜಾಲ" ಎಂದಾಗಿದೆ.

ಮಂತ್ರವು ಆ ದಿನಗಳಲ್ಲಿ ಉದ್ಯಮದ ಭಿನ್ನವಾದ ವಿಧವಾಗಿತ್ತು. ಈ ದಿನ ಪಾಶ್ಚಾತ್ಯ ಜಗತ್ತಿನಲ್ಲಿ, ಹೆಚ್ಚಿನ ಮಂತ್ರಗಳು ಮೋಜಿಗಾಗ ನಡೆಯುತ್ತವೆ; ಮಂತ್ರಗಾರರು ತಾವು ಮಾಡುವಂತಹ ಕೈಚಳಕಗಳು ಸ್ವಾಭಾವಿಕವಾಗಿ ಮಾಡಲ್ಪಡುವವು ಎಂದು ಒಪ್ಪಿಕೊಳ್ಳುತ್ತಾರೆ. ಮಂತ್ರಗಾರರ ರಹಸ್ಯಗಳನ್ನು ತಿಳಿಸಲು ಡಝನಗಟ್ಟಲೇ ಪುಸ್ತಕಗಳನ್ನು ಗ್ರಂಥಾಲಯಗಳು ಹೊಂದಿವೆ, ಮತ್ತು ಅನೇಕ ಪಟ್ಟಣಗಳು "ಮಂತ್ರಗಳಿಗೆ" ಸಂಬಂಧಿಸಿದ ವಸ್ತುಗಳನ್ನು ಹೊಂದಿದ ಅಂಗಡಿಗಳನ್ನು ಹೊಂದಿವೆ. ಆದಿನಗಳಲ್ಲಿ, ಹೇಗೂ ಮಂತ್ರವು ಬಲು ಅಪಾಯಕಾರಿಯಾದ ಗಂಭೀರವಾದ ಉದ್ಯಮವಾಗಿತ್ತು. ರಹಸ್ಯಗಳು ಹೊಟ್ಟೆಕಿಚ್ಚಿನಿಂದ ನಡೆಸಲ್ಪಟ್ಟವುಗಳು ಮತ್ತು ಅಯ್ದ ಕೆಲವರಿಗೆ ಮಾತ್ರ ಕಲಿಸಲ್ಪಡುತ್ತಿದ್ದವು. ಸಾಮಾನ್ಯವಾಗಿ ಈ ರಹಸ್ಯಗಳನ್ನು ಕೆಲ ಕುಟುಂಬಗಳಲ್ಲಿ ಮಾತ್ರ ಇರಿಸಲ್ಪಡುತ್ತಿದ್ದವು ಮತ್ತು ವಂಶದಿಂದ ವಂಶಕ್ಕೆ ರವಾನೆಯಾಗುತ್ತಿದ್ದವು. ಬಾಲಕರು ಬೆಳೆಯುವಾಗ ತಮ್ಮ ತಂದೆಯ ಹೆಜ್ಜೆಜಾಡನ್ನು ಅನುಸರಿಸುತ್ತಿದ್ದರು. ಕೆಲಸಾರಿ ಯೌವನಸ್ಥರು ದೊಡ್ಡ ಕಲ್ಲನ್ನು ಬಹುದಿನಗಳವರೆಗೆ ತಮ್ಮ ಕಂಕುಳಲ್ಲಿ ಹೊತ್ತುಕೊಳ್ಳಬೇಕಿತ್ತು, ಹೀಗೆ ಅವರ ಕಂಕುಳವು ವಿಶಾಲವಾಗುತ್ತಿತ್ತು ಮತ್ತು ನಂತರದಲ್ಲಿ ಅವರ ಮಾಂತ್ರಿಕ ತಂದೆಗಳು ಉತ್ಪಾದಿಸಲು ಬಯಸಿದಂತೆ ಅಲ್ಲಿ ವಸ್ತುಗಳನ್ನು ಅಡಗಿಸಿಟ್ಟುಕೊಳ್ಳಲು ಸಾಧ್ಯವಾಗುತ್ತಿತ್ತು. ದುರದುಷ್ಟವಶಾತ್, ಅನೇಕ ಸಾರಿ ಈ ಮಾಂತ್ರಿಕರು (ಮಾಟಗಾರರು) ತಾವು ತಮ್ಮ ಅದ್ಭುತಗಳನ್ನು ಮಾಡಲು ಶಕ್ತರು ಯಾಕೆಂದರೆ ಕೆಲ ಅದ್ಭುತೀಯ ಶಕ್ತಿಯಿಂದಲೇ ಎಂದು ನಟಿಸುತ್ತಿದ್ದರು. ಸಾಮಾನ್ಯವಾಗಿ ಅವರು ಮಾಡುತ್ತಿದ್ದ ಮಂತ್ರಗಳು ಒಬ್ಬದೇವರನ್ನು ಸಂಬಂಧಿಸಿ ರಹಸ್ಯಮಯದಾದ ಶಕ್ತಿ ಇದೆ ಎಂದು ತೋರಿಸುತ್ತಿದ್ದರು. ಮಾಂತ್ರಿಕನಾದ ಸೀಮೋನನು ಇದನ್ನೇ ಮಾಡಿದನು. ನಮ್ಮ ವೇದಭಾಗವು ಹೇಳುವಂತೆ ಆತನು ತನ್ನನ್ನು "ಮಹಾತ್ಮನೆಂದು ಹೇಳಿಕೊಂಡನು" ಎಂದು.

ಸೀಮೋನನು ಏನನ್ನು ಅಧಿಕಾರಯುಕ್ತವಾಗಿ ಪ್ರತಿಪಾದಿಸಿದನು ಎಂಬುದನ್ನು ನಾವು ಸರಿಯಾಗಿ ತಿಳಿಯೆವು. ಆದಿ ಕ್ರೈಸ್ತರ ಐರೇನಸ್ (ಕ್ರಿ.ಶ. 120-195) ಎಂಬ ಹೆಸರಿನ ಬರಹಾಗಾರನು ಹೇಳುವುದೇನೆಂದರೆ ತಾನೇ ದೇವರಾಗಿದ್ದಾನೆ ಎಂಬುದಕ್ಕೆ ದೊಡ್ಡ ಕಥೆಯನ್ನು ಹೇಳುತ್ತಿದ್ದನು ಪ್ರತ್ಯಕ್ಷವಾಗಿ, ಸೀಮೋನನು, ಅದ್ಭುತಶಕ್ತಿಯ ಹೆಂಗಸನ್ನು ಮಾಡಿದ್ದಾಗಿಯೂ ನಂತರದಲ್ಲಿ ಆಕೆಯು ಭೂಮಿಯನ್ನು ರೂಪಿಸಿದಳು, ಆದರೆ ನಂತರದಲ್ಲಿ ಆಕೆ ಬಿದ್ದು ಹೋದಳು ಮತ್ತು ಮಾನವರೂಪವನ್ನು ಪಡೆದಳು ಎಂದು ಪ್ರತಿಪಾದಿಸುತ್ತಿದ್ದನು. ಐರೇನಸನ ಪ್ರಕಾರ, ಸೀಮೋನನು ಹೇಳುವುದೇನೆಂದರೆ ತಾನು ಆ ಸ್ತ್ರೀಯನ್ನು ಬಿಡಿಸಲು ಬಂದ ಮಾನದ ಸ್ವರೂಪಿ ಮತ್ತು ತನ್ನನ್ನು ನಂಬುವವರೆಲ್ಲರನ್ನೂ ಬಿಡಿಸಲು ಬಂದವನು ಎಂದೂ ಹೇಳುತ್ತಿದ್ದನು.

ಸೀಮೋನನು ಹೇಳಿದ ಕಥೆಯು ಏನೇ ಇರಬಹುದು, ಇದು ಬಲು ಸ್ಫೂರ್ತಿದಾಯಕವಾದದು ಆಗಿರಲೇಬೇಕು, ಮತ್ತು ಆತನು ಒಳ್ಳೆಯ ಮಾಂತ್ರಿಕನೂ ಆಗಿರಲೇಬೇಕು, ಯಾಕೆಂದರೆ ವೇದಭಾಗ ಹೇಳುವ ಹಾಗೆ ಸಮಾರ್ಯದವರೆಲ್ಲರೂ ಆತನೆಡೆಗೆ ಲಕ್ಷ್ಯಕೊಡುತ್ತದ್ದರು ಮತ್ತು "ಈ ಮನುಷ್ಯನು ದೇವರ ಶಕ್ತಿಯಿದ್ದವನು ಎಂದು ಕರೆಯಲ್ಪಡುತ್ತಿದ್ದನು" ಎಂದು ಹೇಳುತ್ತಿದ್ದರು. ಕೆಲಸಾರಿ ಈ ದಿನಗಳಲ್ಲಿ ದೇವರ ಶಕ್ತಿಯ ಮೂಲಕ ಅದ್ಭುತಗಳನ್ನು ಜನರು ಪ್ರತಿಪಾದಿಸುತ್ತಾರೆ. ಈ ಪ್ರತಿಪಾದನೆಗಳು ಸಾಕ್ಷಿಗಳು ಅವುಗಳಿಗೆ ಜೊತೆಕೊಡುವುದರ ಕಾರಣದಿಂದ ಅವುಗಳ ಯಾವಾಗಲೂ ತಬ್ಬಿಬ್ಬುಗೊಳಿಸುವಂತವುಗಳಾಗಿರುತ್ತವೆ: "ನಾನು ಅದ್ಭುತಗಳು ಸಂಭವಿಸುವುದನ್ನು ನೋಡಿದೆ"; "ಅಲ್ಲಿ ಸಂಭವಿಸಿದ ಅದ್ಭುತಗಳನ್ನು ನಾನು ಕೇಳಿದೆನು." ಇವುಗಳಿಂದ ವಿಚಲಿತರಾದ ಜನರು ಆಶ್ಚರ್ಯಚಕಿತರಾಗುತ್ತಾರೆ, "ಒಂದು ವೇಳೆ

ಈ ಮನುಷ್ಯನು ನಿಜವಾಗಿಯೂ ದೇವರ ಶಕ್ತಿಯಿಂದ ಅದ್ಭುತಗಳನ್ನು ಮಾಡದೇ ಹೋಗಿದ್ದರೆ; ಅವನು ಕೊಡುವ ಸಾಕ್ಷಿಯ ಬಗೆಗೆ ಏನು ಹೇಳಬಹುದು? ಸಮಾರ್ಯದ ಪ್ರತಿಯೊಬ್ಬರೂ ಸೀಮೋನನ ಮಾಡಿದುದರ ಈ ಅದ್ಭುತಗಳ ಬಗೆಗೆ "ಸಾಕ್ಷಿಕೊಡುತ್ತಿದ್ದರು," ಆದರೆ ಅದು ಏನನ್ನು ಸಾಬೀತುಗೊಳಿಸುತ್ತದೆ? ಜನರು ಏನನ್ನು ನಂಬಲು ಬಯಸಿದ್ದರೋ ಅದನ್ನೇ ಅವರು ನಂಬುತ್ತಾರೆ.

ಒಂದು ವೇಳೆ ಸೀಮೋನನು ತಾನೇ "ದೇವರ ಶಕ್ತಿ ಆಗಿದ್ದೆನೆ" ಎಂದು ಯೋಚಿಸುತ್ತಿದ್ದನು ಎಂದು ನಾನು ತಿಳಿಯುತ್ತೇನೆ. ಒಂದು ಅತನು ಹಾಗೆ ಮಾಡಿದ್ದಾದರೆ, ಆತನು ಕೇವಲ ಜನರನ್ನು ವಂಚಿಸುವವನಾಗಿದ್ದಾನೆ, ಆತನು ನಿಜವಾಗಿಯೂ "ದೊಡ್ಡ" ಪಾಪಿಯಾಗಿದ್ದು ಆತನಿಗೆ ರಕ್ಷಣೆಯ ಅವಶ್ಯಕತೆಯು ಇತ್ತು.

## ಪರಿವರ್ತಿತನಾದನು (8:5, 12, 13)

ಸೀಮೋನನು ಬಹುಶಃ ಗುರುತಿಸಲ್ಪಟ್ಟ ಮಾಂತ್ರಿಕನಾಗಿರಬಹುದು, ಆದರೆ ಫಿಲಿಪ್ಪನು ಸಮಾರ್ಯಕ್ಕೆ ಬಂದು ನಿಜವಾದ ಅದ್ಭುತಗಳು ಪ್ರಾರಂಭಮಾಡಿದಾಗ ಸೀಮೋನನ ಕೈಚಳಕಗಳು ಕೈತಂತ್ರಗಳು ಅವನ ಮುಂದೆ ಕ್ಷುಲ್ಲಕವಾಗಿ ಕಂಡವು. ಸೀಮೋನನು ಸಹ "ಮಂತ್ರಪಠಿಸುವವರಂತೆ" (ಮಾಂತ್ರಿಕರು ಹೇಳುವ ಹಾಗೆ) ಇದ್ದರೂ ಇದು ಪಿಲಿಪ್ಪನು ಕೊಟ್ಟ ದೇವರ ಸಂದೇಶದ ಮುಂದೆ ಹೋಲಿಸಲಾಗಲಿಲ್ಲ!

> ಫಿಲಿಪ್ಪನು ಸಮಾರ್ಯವೆಂಬ ಪಟ್ಟಣಕ್ಕೆ ಹೋಗಿ ಕ್ರಿಸ್ತನನ್ನು ಅಲ್ಲಿರುವವರಿಗೆ ಪ್ರಕಟಿಸಿದನು (ವಚನ 5).
>
> ಆದರೆ ಫಿಲಿಪ್ಪನು ದೇವರ ರಾಜ್ಯದ ವಿಷಯದಲ್ಲಿಯೂ ಯೇಸುಕ್ರಿಸ್ತನ ಹೆಸರಿನ ವಿಷಯದಲ್ಲಿಯೂ ಶುಭವರ್ತಮಾನವನ್ನು ಸಾರಲು ಗಂಡಸರೂ ಹೆಂಗಸರೂ ನಂಬಿ ದೀಕ್ಷಾಸ್ನಾನಮಾಡಿಸಿಕೊಂಡರು (ವಚನ 12).

ಸಮಾರ್ಯದವರು ನಂಬಿದರು ಮತ್ತು ದೀಕ್ಷಾಸ್ನಾನಮಾಡಿಸಿಕೊಂಡರು, ಆಗ ಅವರು ಕ್ರೈಸ್ತರಾದರು (11:26), ಸಭೆಯ ಸದಸ್ಯರಾದರು (1 ಕೊರಿಂಥ 12:13, 27), ಮತ್ತು ದೇವರ ರಾಜ್ಯದ ಪ್ರಜೆಗಳಾದರು (ಯೋಹಾನ 3:5).

ಈ ಎಲ್ಲವುಗಳಿಗೆ ಸೀಮೋನನು ಹೇಗೆ ಪ್ರತಿಕ್ರಿಯಿಸಿದನು? ನಾನು ನೆನೆಸುತ್ತೇನೆ ಇದು ಮೊದಲಿಗೆ ಆತನಿಗೆ ಕಠಿಣವಾಯಿತು. ಸೀಮೋನನಿಗೆ ದೊಡ್ಡ ಶಕ್ತಿಯಿದೆ ಎಂದು ಜನರು ಯೋಚಿಸುತ್ತಿದ್ದರು. ಆತನು ಬಹುಶಃ ಅಪರಮಿತವಾದ ಕೊಡುಗೆಗಳನ್ನು ಪಡೆದಿದ್ದನು. ನಂತರ, ಒಮ್ಮಲೇ ಒಬ್ಬನು ಬಂದು ಜನಸಮೂಹದ ಲಕ್ಷವನ್ನು ತನ್ನೆಡೆಗೆ ಸೆಳೆಯುತ್ತಾನೆ. ಅಪೊಸ್ತಲರ ಕೃತ್ಯಗಳು 13 ಹೇಳುವುದೇನೆಂದರೆ ಎಲ್ಮಸ್ ಎಂಬ ಇನ್ನೊಂಬ್ಬ ಮಾಂತ್ರಿಕನೂ ಸಹ ತನ್ನ ಪ್ರಭಾವವು ಗದರಿಕೆಗೆ ಒಳಗಾದಾಗ ಅಸ್ತವ್ಯಸ್ತಗೊಂಡನು. ಎಲ್ಮಸನು ಅದ್ಭುತಗಳನ್ನು ಮಾಡುವ ಮನುಷ್ಯನೊಡನೆ ಸಂಘರ್ಷಕ್ಕಿಳಿದನು ಮತ್ತು ಕುರುಡುತನದಲ್ಲಿ ಅದು ಕೊನೆಗೊಂಡಿತು! ಸೀಮೋನನು ಸಹ ಇದೇ ರೀತಿಯಲ್ಲಿ ಪ್ರತಿಕ್ರಿಯಿಸಿಬಹುದಿತ್ತು, ಆದರೆ ಆತನು ಹಾಗೆ ಮಾಡಲಿಲ್ಲ.

"ಸೀಮೋನನೆಂಬ" ಹೆಸರಿನ ಇಬ್ರಿಯ ಅರ್ಥವು "ಕೇಳುವವನು" ಎಂದು (ಮತ್ತು ಕೆಲಸಾರಿ "ಮನಸಾರೆ ಕೇಳುವದು ಮತ್ತು ಕಲಿಯುವದು" ಎಂದಿದೆ). ಇದು ಸೀಮೋನನಿಗೆ ಸರಿಯಾಗಿ ಹೊಂದುತ್ತದೆ, ಯಾಕೆಂದರೆ ಆತನು ಕೇಳುವುದಕ್ಕೂ ಕಲಿಯುದಕ್ಕೂ ಒಪ್ಪುವವನಾಗಿದ್ದನು. ಫಿಲಿಪ್ಪನ ಅದ್ಭುತಗಳು ಪ್ರಾಮಾಣಿಕವಾದವುಗಳು ಎಂದು ತೀರ್ಪುಮಾಡುವಲ್ಲಿ ಸೀಮೋನನಿಗಿಂತ ಅರ್ಹರಾದವರು ಯಾರೊಬ್ಬರೂ ಇರಲಿಲ್ಲ. ಆತನು

ವ್ಯಾಪಾರದ ತಂತ್ರವನ್ನು ಬಲ್ಲವನಾಗಿದ್ದನು. ಪುರಾವೆಗಳನ್ನು ಹೇಗೆ ಮೋಸಗೊಳಿಸಬಹುದೆಂದು ಆತನು ಅರಿತಿದ್ದನು. ಆತನು ಜನಜಂಗುಳಿಯ ಮಾನಸಶಾಸ್ತ್ರವನ್ನು ಅರಿತಿದ್ದನು. ಇವೆಲ್ಲವನ್ನೂ ತಿಳಿದ ಸೀಮೋನನಂತವನು "ಸೂಚಕಕಾರ್ಯಗಳೂ ಮಹತ್ಕಾರ್ಯಗಳೂ ಉಂಟಾಗುವುದನ್ನು ನೋಡಿ ಬೆರಗಾದನು" (ವಚನ 13ಬಿ). "ಬೆರಗಾಗು" ಎಂಬ ಗ್ರೀಕ ಪದವು ವಚನ 9 ಮತ್ತು 11ರಲ್ಲಿ "ಬೆರಗನ್ನು ಹುಟ್ಟಿಸುವವ" ಎಂದು ಭಾಷಾಂತರವಾಗಿದೆ, ಇದು ಸಮಾರ್ಯದ ಜನರು ಸೀಮೋನನ ತಂತ್ರಗಳಿಗೆ ಹೇಗೆ ಪ್ರತಿಕ್ರಯಿಸುತ್ತಿದ್ದರು ಎಂದು ಹೇಳುತ್ತದೆ. ಇನ್ನೊಂದು ಕಾಲಿನಲ್ಲಿ ಬೂಟು ಇದೆ ಎಂಬ ಹಳೆಯದಾದ ಇಂಗ್ಲೀಷ್ ಗಾದೆ ಇದಕ್ಕೆ ಬಳಸಬಹುದು. ಹಿಂದೆ, ಜನರು ಮಂತ್ರಗಳ ತಂತ್ರಗಳಿಂದ ಬೆರಗಾಗುತ್ತಿದ್ದರು; ಆದರೆ ಈ ಜಾದುಗಾರನು ನಿಜವಾದ ಅದ್ಭುತಗಳಿಂದ ಬೆರಗಾದನು!

ಜಾದೂಗಾರನ ತಂತ್ರಗಳು ಮತ್ತು ಅದ್ಭುತಗಳ ಮಧ್ಯೆ ಅನೇಕ ಭಿನ್ನತೆಗಳು ಇವೆ. ಉದಾಹರಣೆಗಾಗಿ, ಜಾದೂಗಾರನ! ಅದ್ಭುತ ಕಾರ್ಯಗಳು ಇದ್ದರೆ ಸ್ವಲ್ಪ ಅಥವಾ ಎಳ್ಳಷ್ಟೂ ಪ್ರಾಯೋಗಿಕ ಮೌಲ್ಯವನ್ನು ಹೊಂದಿರುವುದಿಲ್ಲ. (ಮೊಲವನ್ನು ಕ್ಲೀನಿಂಗ್ ಕಂಪನಿಗೆ ಕೊಡುವುದರ ಬದಲು ಹ್ಯಾಟನ್ನು ಸ್ವಚ್ಛಮಾಡುವ ಉದ್ಯೋಗ ಕೊಡುವುದೇ)? ಇನ್ನೊಂದೆಡೆಯಲ್ಲಿ ಫಿಲಿಪ್ಪನು, ತಾನು ಜನರನ್ನು ವಾಸಿಮಾಡುವುದರ ಮೂಲಕ ಜನರಿಗೆ ಒಳಿತು ಮಾಡಿದನು. ನಾನು ಚಮಚಗಳನ್ನು ಮಣಿಸುವ, ಗಡಿಯಾರಗಳನ್ನು ನಿಲ್ಲಿಸುವಂತಹ ಮಂತ್ರದ ಶಕ್ತಿಯನ್ನು ಪ್ರತಿಪಾದಿಸುವ ಕೆಲ ಕಪಟಪಂಡಿತರನ್ನು ಬಲ್ಲವನಾಗಿದ್ದೇನೆ. ಅವರು ನಿಜವಾಗಿಯೂ ಜಾದೂಶಕ್ತಿಯನ್ನು ಹೊಂದಿದ್ದರೆ, ಅವರು ವಿದೇಶಿ ನೀತಿಯನ್ನು ಮಣಿಸಬಹುದಿತ್ತು ಮತ್ತು ಯುದ್ಧಗಳನ್ನು ನಿಲ್ಲಿಸಬಹುದಿತ್ತು.

ಸೀಮೋನನು ಫಿಲಿಪ್ಪನ ಅದ್ಭುತಗಳನ್ನು ನೋಡಿದಾಗ ಮತ್ತು ಆತನ ವಾಕ್ಯಗಳನ್ನು ಕೇಳಿದಾಗ, ಆತನ ಸಂದೇಶವು ನಿಜವಾದುದು ಎಂದು ತಿಳಿದನು. ಆತನ ಸಂದೇಶಗಳಿಗೆ ಪ್ರತಿಕ್ರಯಿಸುವವರ ಸಾಲಿನಲ್ಲಿ ಸೇರಿಕೊಂಡನು. "ಆಗ ಸೀಮೋನನು ಕೂಡ ನಂಬಿ ದೀಕ್ಷಾಸ್ನಾನಮಾಡಿಸಿಕೊಂಡು ಫಿಲಿಪ್ಪನ ಜೊತೆ ಯಾವಾಗಲೂ ಇದ್ದು ..." (ವಚನ 13ಎ). ನಂತರ ಜನರು ಯಾವಾಗಲೂ ಹೇಳುವುದೇನೆಂದರೆ ಸೀಮೋನನು ಪರಿವರ್ತನೆಯನ್ನು ಹೊಂದಿರಲಿಲ್ಲ, ಆತನು ಕೇವಲ ದೀಕ್ಷಾಸ್ನಾನದ ರೀತಿಯ ಮೂಲಕ ಹೋದನು. ಸೀಮೋನನ ಹೆಸರಿಗೆ ಹೊಂದಿಕೊಂಡಿರುವ ಇವನು ಮಾನವ ಸಂಪ್ರದಾಯಗಳ ಮೂಲದ ಮೂಲಕ ಬಂದಿರಬಹುದು ಯಾಕೆಂದರೆ ಈ ವಿಚಾರವನ್ನು ಬೈಬಲನಿಂದ ನಾವು ಪಡೆಯಲಾರೆವು. ದೇವವಾಕ್ಯವು ಹೇಳುವುದೇನೆಂದರೆ "ಸೀಮೋನನೂ ಸಹ ನಂಬಿದನು" ಎಂದು. ಇನ್ನೊಂದು ಮಾತಿನಲ್ಲಿ ಆತನು ಇತರೆ ಸಮಾರ್ಯದವರು ಮಾಡಿದ ಹಾಗೆ ಸರಿಯಾಗಿ ಹಾಗೆಯೇ ಮಾಡಿದನು. ಮೂಲ ಪದವಾದ "ನಂಬು" ಇದು ಎರಡೂ ಪ್ರಕರಣಗಳಲ್ಲಿ ಒಂದೇ ಆಗಿದೆ. ಒಂದು ವೇಳೆ ಆತನು ಪರಿವರ್ತಿತನಾಗದಿದ್ದರೆ, ಉಳಿದವರು ಪರಿವರ್ತಿತವಾಗುವುದು ಹೇಗೆ? ಆತನು "ದೀಕ್ಷಾಸಾನ" ಹೊಂದಿದಾಗಲೂ ಸಹ; ಅದೇ ರೀತಿಯ ಪದವು ಸೀಮೋನ ಮತ್ತು ಸಮಾರ್ಯದವರಿಬ್ಬರಿಗೂ ಬಳಸಲ್ಪಟ್ಟಿತು. ಯೇಸುವು ವಾಗ್ದಾನಮಾಡಿದಂತೆ "ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು" (ಮಾರ್ಕ 16:16ಅ) ಸತ್ಯವೇದದ ಪ್ರಕಾರ, ಮಂತ್ರಗಾರನಾದ ಸೀಮೋನನು ರಕ್ಷಿಸಲ್ಪಟ್ಟನು. ಆತನ ಜೀವಿತದಲ್ಲಿ ದೊಡ್ಡ ಬದಲಾವಣೆಯು ಸ್ಥಾನಪಡೆಯಿತು; ಆತನು ಪರಿವರ್ತಿತನಾದನು.

ಹೇಗೋ, ಕಥೆಯು ಇನ್ನೂ ಮುಗಿದಿಲ್ಲ.

## ತಪ್ಪು ಮಾಡುವ ಮಗು (8:14-19, 23)

ಯೆರೂಸಲೇಮಿನಲ್ಲಿರುವ ಅಪೊಸ್ತಲರು ಸುವಾರ್ತೆಯು ಸಮಾರ್ಯಕ್ಕೆ ಹರಡಿರುವುದನ್ನು ಕೇಳಿದಾಗ, ಅವರು ಪೇತ್ರ ಮತ್ತು ಯೋಹಾನರನ್ನು ಹೊಸದಾಗಿ

ಕ್ರೈಸ್ತರಾದವರ ಮೇಲೆ ಕೈಯಿಡಲು ಕಳುಹಿಸಿದರು ಹೀಗಾಗಿ ಅವರೂ ಕೂಡ ಅದ್ಭುತೀಯ ವರಗಳನ್ನು ಪಡೆಯಬಹುದಿತ್ತು (ವಚನಗಳು 14-17). ಆದಿ ಕಾಲದ ಸಭೆಯಲ್ಲಿ ಇದೊಂದು ಅಭ್ಯಾಸವಾಗಿತ್ತು. ಜನರು ಹೊಸ ಒಡಂಬಡಿಕೆಯು ಸಂಪೂರ್ಣವಾಗುವವರೆಗೆ ತಮ್ಮನ್ನು ತಾವು ಹೇಗೆ ನಡೆಯಿಸಿಕೊಳ್ಳ ಬೇಕು ಎಂದು ತಿಳಿಯಬಹುದಿತ್ತು. (ಯಾರ ಮೇಲೆ ಅಪೊಸ್ತಲರ ಕೈಗಳು ಇಡಲ್ಪಟ್ಟಿವೆಯೋ ಅಂದರೆ ಫಿಲಿಪ್ಪನಂಥ ಜನರು ಈ ಶಕ್ತಿಯನ್ನು ಇನ್ನೊಬ್ಬರಿಗೆ ಸಾಗಿಸಬಾರದಿತ್ತು ಅದು ಆ ವರಗಳು ಅವರಿಗೆ ಕೊಡಲ್ಪಟ್ಟದ್ದು ಅಪೊಸ್ತಲರ ಕೈಗಳನ್ನು ಇಡುವದರ ಮೂಲಕವೆ [ವಚನ 18] ಅಪೊಸ್ತಲರು ಮರಣಹೊಂದಿದಾಗ, ಅಂಥ ಶಕ್ತಿಗಳನ್ನು ಪಡೆಯುವದು ಸ್ಥಗಿತಗೊಳ್ಳುತ್ತಿದ್ದವು.)

ಅಪೊಸ್ತಲರು ಹೊಸ ಕ್ರೈಸ್ತರ ಮೇಲೆ ತಮ್ಮ ಕೈಗಳನ್ನು ಇಟ್ಟಾಗ, ಅವರಲ್ಲಿ ಕನಿಷ್ಟನಾದವನು ಸಹ ಸೀಮೋನನು ಹಿಂದೆಂದೂ ಮಾಡಲು ಸಮರ್ಥನಾಗದಂತಹ ಆಶ್ಚರ್ಯಗಳನ್ನು ಮಾಡಿದನು. ಅದು ಸಂಭವಿಸಿದಾಗ, ಸೀಮೋನನು ಇನ್ನೂ ಹಿಂದಿನ ತನ್ನ ಮೂಲ ಸಮಸ್ಯೆಗಳಿಗೆ ಪ್ರಶ್ಚಾತ್ತಾಪಪಡಬಹುದು (2:38), ಆದರೂ ಸಹ ನೀನು ಇನ್ನೂ ಮೂಲತಹ ವಾಗಿ ನೀನು ಅದೆತರದ ವ್ಯಕ್ತಿಯಾಗಿದ್ದಿ. ಮತ್ತು ದೇವರ ಸಹಾಯದಿಂದ ನಿನ್ನ ಜೀವಿನದಲ್ಲಿ ಬದಲಾವಣೆಯಾಗುವುದಕೋಸ್ಕರ ಪ್ರಯತ್ನಿಸಬೇಕು. ಸೀಮೋನನ ಪ್ರಕರಣದಲ್ಲಿ, ದೇವರ "ಅದ್ವಿತೀಯ ಶಕ್ತಿಯಿಂದ" ಒಬ್ಬ ಸಾಮಾನ್ಯ ವ್ಯಕ್ತಿಯ ಮಟ್ಟಕ್ಕೆ ಬರುವದು ಅಲ್ಪಕಾಲದ ಹೊಂದಾಣಿಕೆಯಲ್ಲ.

> ಸೀಮೋನನು ತನ್ನ ಮಹತ್ವಾಕಾಂಕ್ಷೆಯನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವ ಮೂಲಕ ಗುರುತರವಾದ ಕಾರ್ಯವನ್ನು ಮಾಡಿದ್ದಾನೆ, ಆದರೆ ಆತನಿಗೆ ತಿರುಗಿ ದೊಡ್ಡವ್ಯಕ್ತಿಯಾಗಬೇಕೆಂಬ ಅವಕಾಶ ಇದೆ ಎಂದು ತಿಳಿದಾಗ, ಶೋಧನೆಯು ಅವನನ್ನು ಬಲವಾಗಿ ಹಿಡಿದುಕೊಂಡಿತು. ಅಪೊಸ್ತಲರು ಕೈಗಳನ್ನಿಡುವುದರ ಮೂಲಕ ವಾಗಿ ಪವಿತ್ರಾತ್ಮ ದಾನವಾಗುವುದನ್ನು ಸೀಮೋನನು ನೋಡಿ ಹಣವನ್ನು ತಂದು ಅವರ ಮುಂಟ್ಟು ನಾನು ಯಾರ ಮೇಲೆ ಕೈಗಳನ್ನುಡುತ್ತೇನೋ ಅವರು ಪವಿತ್ರಾತ್ಮವರವನ್ನು ಹೊಂದುವಂತೆ ಈ ಅಧಿಕಾರವನ್ನು ನನಗೂ ಕೊಡಿರಿ ಅಂದನು (ವಚನಗಳು 18, 19).

ನಾನು ಯೌವಸ್ಥನಾಗಿದ್ದಾಗ, ಸೀಮೋನನು ನಿಜವಾದ ಅದ್ಭುತಗಳನ್ನು ಸಾಮರ್ಥವನ್ನು ಮಾತ್ರ ಬಯಸುತ್ತಿದ್ದಾನೆ ಎಂದು ತಿಳಿದಿದ್ದೆನು (ಬಹುಶಃ ಪ್ರತಿಯೊಂದು ಹಂತದ ಮಾಂತ್ರಿಕರು ಕೆಲವು ಸಾರಿ ಅಥವಾ ಇನ್ನೊಂದು ರೀತಿಯಲ್ಲಿ ಹಗಲುಗನಸುಳ್ಳವ ರಾಗಿರುತ್ತಾರೆಂದು ನಾನು ಎಂದುಕೊಂಡಿದ್ದೇನೆ: ನಾನು ನಿಜವಾಗಿಯೂ ಮಾಡುವ ಸಂಗತಿಗಳನ್ನು ಮಾಡುವಂತೆ ನಟಿಸುತ್ತಿದ್ದೇನೆಯೇ? ಸೀಮೋನನು ಹೇಗೋ, ಅದಕ್ಕಿಂತ ಹೆಚ್ಚಿನದನ್ನು ಬಯಸುವವನಾಗಿದ್ದನು. ಆತನು ಕೇವಲ ಫಿಲಿಪ್ಪನಂತೆಯೂ ಮತ್ತು ಇತರ ಸಮಾರ್ಯದವರು ಇರುವಂತೆ ಇರಲು ಬಯಸಿರಲಿಲ್ಲ. ಆತನು ಮೇಲಕ್ಕೆ ಹೋಗ ಬೇಕೆಂದು ಬಯಸುವವನಾಗಿದ್ದನು; ಆತನು ಅಪೊಸ್ತರಂತೆ ಇರಲು ಬಯಸಿದ್ದನು. ಆತನಿಗೆ ಅಪೊಸ್ತಲರಂತೆ ಜನರ ಮೇಲೆ ಕೈಗಳನ್ನಿಡುವದು ತಾನು ಬಯಸುವವರನ್ನು ಸಂತುಷ್ಟಗೊಳಿಸಲು ಅದ್ಭುತೀಯ ವರಗಳನ್ನು ಕೊಡುವುದು ಈ ಸಾಮರ್ಥ್ಯಗಳು ಅವನಿಗೆ ಬೇಕಿತ್ತು.

ಸೀಮೋನನು ಆ ವರಗಳನ್ನು ಬಯಸಿದುದರ ಕಾರಣಗಳನ್ನು ನಾನು ಅರಿಯೆನು, ಆದರೆ ಅಂಥ ವರಗಳು ತಪ್ಪಾಗಿ ಉಪಯೋಗಿತವಾದರೆ ಎಂದು ಯೋಚಿಸಲು ಭಯವಾಗುತ್ತದೆ. ಯಾವುದಕ್ಕೂ ಹೇಸದವನೊಬ್ಬನು ಹೇಳುವಂತೆ ಒಬ್ಬನು ಕಲ್ಪಿಸಿಕೊಳ್ಳುವಂತೆ "ನನಗೆ ನಿಮ್ಮ ಬೆಳ್ಳಿ ಮತ್ತು ಚಿನ್ನವನ್ನು ಕೊಡಿರಿ ಮತ್ತು ನಾನು ನಿಜವಾದ ಅದ್ಭುತ ಕಾರ್ಯಗಳನ್ನು

ಮಾಡುವುದಕ್ಕೆ ಸಮರ್ಥರನ್ನಾಗಿಸುವೆನು" ಎಂದು ಹೇಳುವರು. ಬಹುಶಃ ಸೀಮೋನನು ಅಂತಹ ವಿಚಾರಗಳನ್ನು ತನ್ನ ಮನಸ್ಸಿನಲ್ಲಿ ಇಟ್ಟುಕೊಂಡಿದ್ದನು, ಆದರೆ ಪೇತ್ರನು ಇನ್ನೂ ಹೇಳುತ್ತಾನೆ "ಹಾನಿಕರವಾದ ವಿಷವೂ ದುಷ್ಟತ್ವದಲ್ಲಿ ಬಿಗಿಯುವ ಬಂಧವೂ" ಆಗಿದ್ದಾನೆ ಎಂದು ಹೇಳುತ್ತಾನೆ (ವಚನ 23).

The Revised English Bibleನಲ್ಲಿ "ಹಾನಿಕರವಾದ ವಿಷವೂ ಮತ್ತು ಪಾಪಗಳ ಸರಮಾಲೆಯು ನಿನ್ನ ಹಣೆಬರಹದಲ್ಲಿ ಇವೆ"[1] ಎಂದಿದೆ. "ಹಾನಿಕರವಾದ ವಿಷವು" ಇದರ ಇಬ್ರಿಯದಲ್ಲಿದ ವಿವರಣೆಯ ಅರ್ಥವು "ಅತೀ ಹೆಚ್ಚಿನ ವಿಷ"[2] ಎಂದಿದೆ. ಸೀಮೋನನು "ಯಾರೂ ಇರದ" ಸಮುದಾಯದಲ್ಲಿ ಹೊಂದುವದು ಕಷ್ಟವಾಗಿರಬಹುದು; ವಿಷವು ಆತನ ಹೃದಯವನ್ನು ಕಹಿಯನ್ನಾಗಿಸಿತ್ತು. ಮುಂದೆ, ಆತನು "ಅನ್ಯಾಯದ ದಾಸತ್ವದಲ್ಲಿ" ಇದ್ದನು. ಪಾಪವು ದಾಸನನ್ನಾಗಿಸಿತು! ನಾವು ಕ್ರೈಸ್ತರಾದಾಗ, ಪಾಪದ ಸಂಕೋಲೆಯು ಬಿದ್ದು ಹೋಗುವವು (ರೋಮಾಪುರ 6:17, 18). ನಾವು ಹೇಗೋ, ಪಾಪದೆಡೆಗೆ ಹಿಂತಿರುಗುವೆವು ಮತ್ತು ತಿರುಗೊಂದಾವರ್ತಿ ದಾಸರಾಗುವೆವು!

ಕೆಲವರು ಬೋಧಿಸುವುದೇನೆಂದರೆ, ಒಂದು ಸಾರಿ ಒಬ್ಬ ವ್ಯಕ್ತಿಯು ಕ್ರೈಸ್ತನಾದರೆ, ಆತನು ಎಂದಿಗೂ ಬಿದ್ದುಹೋಗನು, ಆದರೆ ಪೌಲನು ಪ್ರತಿಯೊಬ್ಬ ದೇವರ ಮಗುವಿಗೆ ಎಚ್ಚರಿಸುತ್ತಾನೆ "ಆದಕಾರಣ ನಿಂತಿದ್ದೇನೆಂದು ನೆನೆಸುವವನು ಬೀಳದಂತೆ ಎಚ್ಚರವಾಗಿರಲಿ" (1 ಕೊರಿಂಥ 10:12). ಸೀಮೋನನು ತಾನು ಪಾಪದಲ್ಲಿ ಬೀಳುವೆನು ಎಂಬುದರತ್ತ ಲಕ್ಷಕೊಡಲಿಲ್ಲ. ತಾನು ಸಂಪಾದಿಸಿದ್ದೆಲ್ಲವನ್ನೂ ಕಳೆದುಕೊಳ್ಳುವ ಅಪಾಯದ ಸ್ಥಿತಿಯಲ್ಲಿ ಆತನು ಇದ್ದನು. ಆತನು ಕಳೆದು ಕೊಳ್ಳುತ್ತಾ ಇರುವ ಅಪಾಯದಲ್ಲಿ ಆತನೆ ಇದ್ದನು!

ಅಧ್ಯಯನದ ಮೊದಲ ಭಾಗಕ್ಕೆ ನಾನು "ದೂರವಾದ ಪಾಪಿಗಳು" ಎಂದು ಹೆಸರಿಸಿದ್ದೇನೆ. ಯಾಕೆಂದರೆ ಸೀಮೋನನು ಒಬ್ಬ ಪ್ರತ್ಯೇಕವಾದ ವ್ಯಕ್ತಿಯಾಗಿ ಪ್ರಾರಂಭಿಸಿದನು ಮತ್ತು ಎಂದಿಗೂ ಕರ್ತನೊಂದಿಗೆ ರಕ್ಷಣೆಯ ಸಂಬಂಧವನ್ನು ಹೊಂದಿರದೇ ಇರುವುದಾಗಿರುವುದರಿಂದಲೇ (ಎಫೆಸ 2:12). ಈ ವಿಭಾಗವು "ತಪ್ಪು ಮಾಡುವ ಮಗು" ಎಂಬ ಶೀರ್ಷಿಕೆಯನ್ನು ಹೊಂದಿದೆ ಯಾಕೆಂದರೆ ಕರ್ತನೊಂದಿಗೆ ಸೀಮೋನನ ಸಂಬಂಧವು ಬದಲಾಯಿತು. ಆತನು ಈಗ ದೂರವಾದ ವ್ಯಕ್ತಿಯಲ್ಲ; ಬದಲಾಗಿ ಆತನು ದೇವರ ಮಗುವಾಗಿದ್ದಾನೆ. ಆದರೂ ತಪ್ಪುಮಾಡುವ ಮಗುವಾಗಿದ್ದಾನೆ. ಮತ್ತೊಂದಾವರ್ತಿ ಸೀಮೋನನು ಪರಿವರ್ತನೆಯ (ಬದಲಾವಣೆ) ಪ್ರಕ್ರಿಯೆಯ ಮೂಲಕ ಹೋಗುವ ಅವಶ್ಯಕತೆಯು ಇದೆ (ಯಾಕೋಬ 5:19, 20). ಆತನು ಹೇಗೆ ಪುನತುಂಬಿಸಲ್ಪಡಬೇಕು ಎಂಬುದುರ ಬಗೆಗೆ ತಿಳಿಯುವದು ಅವನಿಗೆ ಅವಶ್ಯವಿದೆ.

## ಪುನ ಸ್ಥಾಪಿಸಲ್ಪಟ್ಟಿದ್ದು (8:22, 24)

ಕ್ರೈಸ್ತನಾಗುವ ಪ್ರಕ್ರಿಯೆಯನ್ನು ಬೈಬಲ್ "ಹೊಸದಾಗಿ ಹುಟ್ಟುವದು" ಎಂದು ಕರೆಯುತ್ತದೆ (ಯೋಹಾನ 3:3-5). ಒಬ್ಬನು ತಿರುಗಿ ಹುಟ್ಟಿದ ನಂತರ, ಆತನು ಪುನಃ ಆ ಪ್ರಕ್ರಿಯೆಯನ್ನು ಪುನರಾವರ್ತಿಸುವದಿಲ್ಲ ಆತನು ಯಾವಾಗಲೂ ಮಗುವಿನ ಹಾಗಿದ್ದಾನೆ. ಒಂದು ಮಗುವು, ತನ್ನ ಕುಟುಂಬದ ಸುರಕ್ಷತೆಯಡಿಯಲ್ಲಿಯೇ ಆತನು ಬೀಳುತ್ತಾನೆ. ದೇವರ ಮಗುವು ತನ್ನ ತಂದೆಯ ಮತ್ತು ಕುಟುಂಬದ ಒಳ್ಳೆಯ ನಡವಳಿಕೆಯನ್ನು ಹೇಗೆ ಪುನಃ ತುಂಬಿಕೊಳ್ಳುತ್ತಾನೆ?

ಪೇತ್ರನು ಸೀಮೋನನನ್ನು ಗಂಭೀರವಾಗಿ ಗದರಿಸಿದ ನಂತರ, ಆತನು ಹೇಳಿದನು "ಆದುದರಿಂದ ಈ ನಿನ್ನ ಕೆಟ್ಟತನವನ್ನು ಬಿಟ್ಟು ದೇವರ ಕಡೆಗೆ ತಿರುಗಿಕೊಂಡು ಕರ್ತನು ನಿನ್ನ ಮನಸ್ಸಿನ ಆಲೋಚನೆಯನ್ನು ಕ್ಷಮಿಸುವನೋ ಏನೋ ಆತನನ್ನು ಬೇಡಿಕೋ" (ವಚನ 22). ದೇವರ ಮಗುವಿನ ತಪ್ಪು ದೇವರೆಡೆಗೆ ತಿರುಗಿಕೊಳ್ಳುವ ರೀತಿಯ ಪೇತ್ರನ ಮಾತುಗಳು

“ಪಶ್ಚಾತ್ತಾಪ”[3] ಮತ್ತು ಪ್ರಾರ್ಥಿಸು ಎಂಬ ಪದಗಳಿಂದ ಸಾರಾಂಶಿತವಾಗಿವೆ. ಇದು “ಪರದೈಸಿನ ಎರಡನೆಯ ನಿಯಮ” ಎಂದು ಕರೆಯಲ್ಪಡುತ್ತದೆ. ನಂಬಲು ಮತ್ತು ಪಶ್ಚಾತ್ತಾಪಪಡಲು ಮತ್ತು ದೀಕ್ಷಾಸ್ನಾನ ಹೊಂದಲು ಹೇಳುವಂತದ್ದನ್ನು ತಿಳಿಸುವ “ಪರದೈಸಿನ ಒಂದನೆಯ ನಿಮಯ” ಇದೆ (2:38; 16:31-34; 22:16). “ಪರದೈಸಿನ ಎರಡನೆಯ ನಿಯಮ” ಇದೆ.[4] ದೇವರ ಮಕ್ಕಳಾದ ನಾವು ಪಾಪಮಾಡಿದಾಗ, ನಮ್ಮ ಜೀವಿತದಲ್ಲಿನ ಪಾಪದ ಬಗೆಗೆ ಮತ್ತು ದೇವರ ಸಹಾಯದೊಡನೆ[5] ಪಾಪವನ್ನು ತೆಗೆದುಹಾಕುವ ಬಗೆಗೆ ನಮ್ಮ “ಮನೊಭಾವನೆಯನ್ನು ಬದಲಾಯಿಸಲು” ನಮಗೆ ಮೊದಲು ಪಶ್ಚಾತ್ತಾಪಪಡಲು ಹೇಳಲಾಗುತ್ತದೆ. ನಮ್ಮ ಹೃದಯವು ಒಂದು ಸಾರಿ ಒಡೆದದ್ದೇ ಅದರೆ ಮತ್ತು ನಮ್ಮ ನಿರ್ಧಾರವು ಗಟ್ಟಿಯಾಗಿದ್ದರೆ, ನಂತರ (ಮತ್ತು ಕೇವಲ ನಂತರ) ಕ್ಷಮಾಪಣೆಗಾಗಿ ನಾವು ದೇವರನ್ನು ಪ್ರಾರ್ಥಿಸುತ್ತೇವೆ. ಪಶ್ಚಾತ್ತಾಪ ಮತ್ತು ಪ್ರಾರ್ಥನೆಗಳು ಮಾತ್ರ ಸೀಮೋನನ ನಿರೀಕ್ಷೆಗಳಾಗಿದ್ದವು.

ಸೀಮೋನನು ಅಲುಗಾಡಿಸಲ್ಪಟ್ಟನು. ಆತನು ಪೇತ್ರನಿಗೆ “ನೀವು ಹೇಳಿರುವ ಸಂಗತಿಗಳಲ್ಲಿ ಯಾವುದೂ ನನ್ನ ಮೇಲೆ ಬಾರದಂತೆ ನನಗೋಸ್ಕರ ನೀವೇ ಕರ್ತನನ್ನು ಬೇಡಿಕೊಳ್ಳಿರಿ” (ವಚನ 24) ಎಂದು ಹೇಳಿದನು. ಪಾಶ್ಚಾತ್ಯಾ ವೇದಭಾಗವು ಹೇಳುವುದೇನೆಂದರೆ ಪೇತ್ರ ಯೋಹಾನರು ಆತನಿಗಾಗಿ ಪ್ರಾರ್ಥಿಸುತ್ತಿದ್ದಂತೆ ಸೀಮೋನನು ನಿರಂತರವಾಗಿ ಅತ್ತನು. ಸೀಮೋನನು ತನ್ನ ಅವಶ್ಯಕತೆಯನ್ನು ಅರಿತನು ಮತ್ತು ಪೇತ್ರ ಯೋಹಾನರನ್ನು ಪ್ರಾರ್ಥನೆಗಾಗಿ ಕೇಳಿದನು. ಯಾಕೋಬ 5:16 ಹೇಳುವಂತೆ ನಾವು ಒಬ್ಬರಿಗೊಬ್ಬರು ಪಾಪಗಳನ್ನು ಅರಿಕೆ ಮಾಡೋಣ ಮತ್ತು ಒಬ್ಬರಿಗೋಸ್ಕರ ಒಬ್ಬರು ದೇವರನ್ನು ಪ್ರಾರ್ಥಿಸೋಣ. ಮೊದಲ ಯೋಹಾನ 1:9ರಲ್ಲಿ ಹೇಳುವಂತೆ “ಒಂದು ವೇಳೆ ನಾವು ನಮ್ಮ ತಪ್ಪುಗಳನ್ನು ಅರಿಕೆಮಾಡಿದ್ದಾದರೆ, ಆತನು ನಂಬಿಗಸ್ತನೂ ನೀತಿವಂತನೂ ಆಗಿರುವುದರಿಂದ ನಮ್ಮ ಪಾಪಗಳನ್ನು ಕ್ಷಮಿಸುವನು ಮತ್ತು ಎಲ್ಲ ಅನೀತಿಗಳಿಂದಲೂ ನಮ್ಮನ್ನು ಶುದ್ಧಮಾಡುವನು.”

## ಮುಕ್ತಾಯ

ಸೀಮೋನನಿಗೆ ಏನು ಸಂಭವಿಸಿತು? ನಾನೇನೂ ಅರಿಯೆನು. ಆತನ ಬಗೆಗೆ ಹೆಚ್ಚಿನದು ಮುಂದಿನ ಶತಮಾನಗಳಲ್ಲಿ ಬರೆಯಲ್ಪಟ್ಟಿತು, ಆದರೆ ನಿಜಾಂಶವನ್ನು ಕಟ್ಟು ಕಥೆಯಿಂದ ಬೇರೆ ಮಾಡುವದು ಅಸಾಧ್ಯವಾದುದ್ದು. ಅಪೊಸ್ತಲರ ಕೃತ್ಯಗಳು 8ರಲ್ಲಿ ಸಿಕ್ಕುವ ಆತನ ಬಗ್ಗೆ ನಾವೆಲ್ಲರೂ ತಿಳಿದಿದ್ದೇವೆ. ವಚನ 24 ಸೂಚಿಸುವಂತೆ ಆತನ ಭಾಗದಲ್ಲಿ ಸಹಜವಾದ ಬದಲಾವಣೆಯ ಪ್ರವೃತ್ತಿಯು ಮತ್ತು ತನ್ನ ತಲಾಂತುಗಳನ್ನು ಬಳಸುವಲ್ಲಿ ಆತನು ಸ್ಥಿತನಾಗಿದ್ದು ಇವುಗಳು ದೇವರಿಗೆ ವಿರುದ್ಧವಾದವುಗಳಲ್ಲ. ಆತನ ಕೊನೆಯು ಏನೇ ಆಗಿದ್ದರೂ ಫಿಲಿಪ್ಪನನ್ನು ಆತನ ಬೋಧನೆಗಳ ಮೂಲಕ ಕರ್ತನನ್ನು ಭೇಟಿಯಾಗುವ ಅವಕಾಶ ಆತನಿಗೆ ಲಭಿಸಿತು. ಮತ್ತು ಆತನು ಸರಿಯಾದ ಮಾರ್ಗದಲ್ಲಿ ಚಲಿಸಲಾರಂಭಿಸಿದನು.

ಕೆಲ ಸಮಯದ ಹಿಂದೆ. ಯೇಸು ಕ್ರಿಸ್ತನ ಬಗೆಗೆ ನಿರ್ಧಾರ ಕೈಕೊಂಡ ಮಂತ್ರವಾದಿಯ ವಿವರಣೆಯು ನನಗೆ ಓದಲು ಸಿಕ್ಕಿತು. ಆತನು ನಮ್ಮ ಸಮಯದ ದೊಡ್ಡ ದೃಷ್ಟಾಂತಕಾರನಾದ ಆಂಡ್ರು ್ಯಕೋಲ. ಆಂಡ್ರು ್ಯಕೋಲ ಈತನೊಬ್ಬ ಹದಿನೈದು ವರ್ಷಗಳಿಂದ ಮಾಂತ್ರಿಕ ಕೆಲಸವನ್ನು ಮಾಡುತ್ತಾ ಬಂದವನು. ಆತನು “ನನ್ನ ಜೀವನದಲ್ಲಿನ ಕೆಲ ಕೊರತೆಯ ಬಗೆಗೆ ನಾನು ಎಚ್ಚರದಿಂದ ಇರುವವನಾಗಿದ್ದೇನೆ. ಅನೇಕ ರಾತ್ರಿಗಳು ನನ್ನ ಡ್ರೆಸ್ಸಿಂಗ ಕೋಣೆಯ ಹಿಂದುಗಡೆಯಲ್ಲಿ ನಾನು ನನ್ನ ಜೀವಿತದ ಬಗೆಗೆ ಯೋಚಿಸುತ್ತಿರುವಾಗ ಇಲ್ಲ ನಾನು ನನ್ನ ಜೀವಿತದಲ್ಲಿ ಮುಂದಿಟ್ಟುಕೊಂಡಂತಹ ಅನೇಕ ಸಂಗತಿಗಳನ್ನು ಈಡೆರಿಸಿಕೊಂಡಿದ್ದೇನೆ, ಆದರೆ ಇನ್ನೂ ನನ್ನ ಜೀವಿತದಲ್ಲಿ ಶೋನ್ಯತೆಯು ಇದೆ ಇನ್ನೂ ಇದೆ” ಎಂದುಕೊಳ್ಳುತ್ತಾನೆ. ಆತನ ಪ್ರದರ್ಶನದ ಉದ್ಯಮದ ಇಬ್ಬರು ಸ್ನೇಹಿತರು ಆತ್ಮಹತ್ಯೆಮಾಡಿಕೊಂಡಾಗ, ಆತನು “ನಾನು ಯಾಕೆ ಇಲ್ಲಿದ್ದೇನೆ? ನಾನು ಎಲ್ಲಿಗೆ ಹೋಗುತ್ತಿದ್ದೇನೆ? ನನ್ನ ಜೀವನದ ಉದ್ದೇಶ

ವೇನು?"[6] ಎಂಬ ಮೂಲ ಪ್ರಶ್ನೆಗಳನ್ನು ಕೇಳಲಾರಂಭಿಸಿದನು. ಆತನು ಅಂತಿಮವಾಗಿ ಕ್ರಿಸ್ತನ ಅದ್ಭುತಗಳನ್ನು ಮಾಂತ್ರಿಕನ ದೃಷ್ಟಿಯಿಂದ ಶೋಧನೆ ಮಾಡುವ ಸವಾಲನ್ನು ಮಾಡಿದನು. ಆತ ಈ ಕೆಳಗಿನ ರೀತಿಯಲ್ಲಿ ಬರೆದನು:

> ಅರಿಝೋನ ಯುನಿವರ್ಸಿಟಿಯಿಂದ ತತ್ವಶಾಸ್ತ್ರ ಮತ್ತು ಮಾನಶಾಸ್ತ್ರದಲ್ಲಿ ಪದವಿಯ ಹಿನ್ನಲೆಯಲ್ಲಿನ ಒಬ್ಬ ಜಾದುಗಾರನಾಗಿದ್ದಾಗ್ಯೂ, ನಾನು ಬಲು ಸಂಶಯಿತನಾಗಿದ್ದೆನು. ಯೇಸು ದೇವರೆಂದು ಪ್ರತಿಪಾದಿಸಿದ್ದನ್ನು ತಿಳಿಯಲು ನಾನು ಬೈಬಲ್ಲನ್ನು ಸಾಕಷ್ಟು ಓದಿದೆನು. ಆತನು ಸುಳ್ಳುಗಾರನೋ ಹುಚ್ಚನೋ ಆಗಿರಬಹುದು, ಅಥವಾ ಆತನು ಪ್ರತಿಪಾದಿಸಿದಂತೆ ದೇವರೋ ಅಥವಾ ಕರ್ತನೂ ಇವುಗಳಲ್ಲಿ ಯಾವುದೋ ಆಗಿರಬಹುದು.
>
> ಹೀಗೆ ನಾನು ಯೇಸುವಿನ ಅದ್ಭುತ ಕಾರ್ಯಗಳನ್ನು ಜಾದೂಗಾರನ ದೃಷ್ಟಿಯಿಂದ ಅಧ್ಯಯನ ಮಾಡಲಾರಂಭಿಸಿದೆನು. ನೋಡಿರಿ, ಇದು ವಿಜ್ಞಾನಿಗಳು ಪ್ರಾಧ್ಯಾಪಕರು, ದೈವಜ್ಞಾನಿಗಳು ಅಥವಾ ಯಾರೇ ಆಗಿರಲಿ ಚಾಣಾಕ್ಷ ಜಾದೂಗಾರನಿಂದ ವಂಚಿತರಾಗಲು ಸಾಧ್ಯ ಎಂದು ನಾನು ಅರಿತೆನು. ವೀಕ್ಷಕರನ್ನು ಮೂರ್ಖರನ್ನಾಗಿಸಲು ನಾವು ಬಳಸುವ ಎಲ್ಲಾ ಮನಶಾಸ್ತ್ರ ಮತ್ತು ವಿವಿಧ ರೀತಿಗಳನ್ನು ಅವರು ಅರಿತಿರಲಾರರು.
>
> ಅವರು ಕ್ರಿಸ್ತನ ಅದ್ಭುತಗಳನ್ನು ಶೋಧನೆ ಮಾಡುವ ಅರ್ಹತೆಗಳನ್ನು ಅವರು ಹೊಂದಿದ್ದಾರೆ ಎಂದು ನಾನು ನಿಸ್ಸಂಕೋಚವಾಗಿ ಹೇಳಬಲ್ಲೆ. ಇನ್ನೊಂದೆಡೆಯಲ್ಲಿ ನಾನು ನನ್ನ ಹುದ್ದೆಯ ಬಗೆಗೆ ಮತ್ತು ಮಾಂತ್ರಿಕನ ಸಾಮರ್ಥವನ್ನು ಸಾಧಿಸುವ ಬಗೆಗೆ ನನಗೆ ಬಲು ಹೆಮ್ಮೆಯಿದೆ. ನಾನೆಂದಿಗೂ ಇನ್ನೊಬ್ಬ ಮಾಂತ್ರಿಕನಿಂದ ಮೂರ್ಖನಾಗಿಲ್ಲ. ಆದ್ದರಿಂದ ಮೊದಲ ನನಗೆ ಬಲು ಹೆಮ್ಮೆಯಿದೆ. ಆದ್ದರಿಂದ ಮೊದಲ ಶತಮಾನದ ಮೋಸಗಾರನಿಂದ ವಂಚಿತನಾಗುವ ಬಯಕೆ ನನಗಿಲ್ಲ ಒಂದುವೇಳೆ ಕ್ರಿಸ್ತನ ಇದೆಲ್ಲವೂ ಆಗಿದ್ದರೆ.[7]

ಪುರಾವೆಗಳ ವಿಚಾರವಾಗಿ ಯೇಸುವಿನ ಪುನರುತ್ಥಾನವು ಮತ್ತು ಇತರೆ ಅದ್ಭುತಗಳ ಕುರಿತಾಗಿರುವ ಸಾಕ್ಷಿಗಳ ಬಗೆಗೆ ಈ ನಿರ್ಧಾರಕ್ಕೆ ಬಂದೆನು ಅದೇನೆಂದರೆ ಸಮ್ಮೋಹನದಿಂದ, ವಶೀಕರಣದಿಮೋಸ ಇವುಗಳ ಬಗೆಯಿಂದ ಯೇಸು ಕ್ರಿಸ್ತನನ್ನು ಪ್ರತಿಪಾದಿಸುವ ಪ್ರಶ್ನೆಯನ್ನು ನಾನೆಂದಿಗೂ ಮಾಡಲಾರೆನು. ಈ ಮಾಂತ್ರಿಕನು ಮುಂದೆ ಯೇಸು ಮತ್ತು ಅಪೊಸ್ತಲರು ಯಾರು ಮತ್ತು ಅವರು ಏನನ್ನು ಬೋಧಿಸಿದರು ಎಂಬುದಕ್ಕೆ ಸಂಬಧಿತವಾಗಿ ಅಭ್ಯಸಿಸಿದನು. ನಂತರ, ಆತನು ಇಟ್ಟಹಾಗೆ, ಆತನು "ಅವರು ಏನನ್ನು ಹೇಳಿದರೋ ಅದನ್ನು ಪರೀಕ್ಷಿಸಲು ವೈಜ್ಞಾನಿಕ ಪ್ರಯೋಗಗಳನ್ನು ಇಟ್ಟನು" ಆತನು ತನ್ನ ಸಾಕ್ಷಿಯನ್ನು ಹೇಳುವ ಮೂಲಕ ಆತನಿಗೆ ನೆರವಾದನು, ಯಾವುದೇ ವ್ಯಕ್ತಿಯು ಇದನ್ನು ಮಾಡಲು ಇದೊಂದು ದೊಡ್ಡ ನಿರ್ಧಾರವಾಗಿದೆ. ನನ್ನೊಬ್ಬ ಸ್ನೇಹಿತನು ನನಗೆ ಒಂದು ಸಾರಿ ಹೇಳಿದನು. "ಅಂದರೆ, ನೀನು ಜೀವಿತದ ಮೂಲಕ ಹೋಗುವಾಗ, ನೀನು ಕ್ರಿಸ್ತನನ್ನು ಬಿಟ್ಟೀದ್ದೇ ಆದರೆ ನಂತರ ನೀನು ಎಲ್ಲವನ್ನೂ ಕಳಕೊಂಡವನಾಗಿರುತ್ತಿ" ಎಂದು.[8]

ಈ ಪಾಠದಲ್ಲಿ, ನಾನು ಹೆಚ್ಚಾಗಿ ಮಾಂತ್ರಿಕರ ಬಗೆಗೆ ಮಾತನಾಡಿದ್ದೇನೆ, ಆದರೆ ಮಾಂತ್ರಿಕನ ಬಗೆಗೆ ಏನು ಹೇಳಿದೆಯೋ ಅದೂ ಸಹ ನಿಮ್ಮ ವಿಷಯದಲ್ಲಿ ಕೂಡಾ ನಿಜವಾಗಿದೆ. ಒಬ್ಬ ಮಾಂತ್ರಿಕನು ವೀಕ್ಷಕನನ್ನು ಮೋಸಮಾಡುವಂತೆ ನೀನು ಕೂಡ ನಿನ್ನನ್ನು ಸುಲಭವಾಗಿ ಮೋಸಮಾಡಿಕೊಳ್ಳಬಹುದು. ಒಂದು ವೇಳೆ ನೀನು ಕೇವಲ ಯೇಸುಕ್ರಿಸ್ತನಿಲ್ಲದೆ ನಿನ್ನ ಒಳ್ಳೆಯ ಜೀವಿತದಲ್ಲಿ ರಕ್ಷಿಸಲ್ಪಡುವಿ ಎಂದು ನೀನು ತಿಳಿದುಕೊಂಡಿದ್ದೇ ಆದರೆ; ಅದು ಸಾಧ್ಯವಿಲ್ಲ (ರೋಮಾಪುರ 3:23; 6:23)! ಒಂದು ವೇಳೆ ನೀನು ದೀಕ್ಷಾಸ್ನಾನ ಹೊಂದುವ (ನೀರಿನಲ್ಲಿ ಮುಳುಗಿಸುವ) ಮೂಲಕ ನಿನ್ನ ನಂಬಿಕೆಯನ್ನು ಕ್ರಿಸ್ತನಲ್ಲಿ ವ್ಯಕ್ತಪಡಿಸಿದ್ದೇ

ಆದರೆ ಅದನ್ನು ಕೂಡಲೇ ಮಾಡು. ಸೀಮೋನನಂತೆ ನೀನೂ ಕೂಡಾ ಮಾರ್ಗತಪ್ಪಿ ಬಿದ್ದಿದ್ದಾರೆ, ಪಶ್ಚಾತ್ತಾಪ, ಕ್ಷಮಾಪಣೆ ಮತ್ತು ಪ್ರಾರ್ಥನೆಗಳ ಮೂಲಕ ಹಿಂತಿರುಗುವ ಧೈರ್ಯವನ್ನು ಮಾಡು. ಪ್ರತಿಯೊಂದೂ ದಿನವೂ "ಚಮತ್ಕಾರದ" ಗುಣಗಳನ್ನು ಹೊಂದಿರುವುದನ್ನು ನೀವು ಕಂಡುಕೊಳ್ಳುವಿರಿ!

---

ಟಿಪ್ಪಣಿಗಳು

[1]ಆತನು ಅಪಾಯಕಾರಿ ಜೀವಿಯಾಗಿದ್ದು "ಹಾನಿಕರವಾದ ವಿಷದಂತೆ" ಇದ್ದನು (ಇಲ್ಲಿ ಭವಿಷ್ಯತ್ತ ಕಾಲವು ಬಳಸಲಾಗಿದೆ). [2]ಕಡುಕಹಿ (ಯಕೃತ್ತು) ಇದು ಒಂದು ಕಹಿಯಾದ ದ್ರವವಾಗಿದೆ. ಹೀಗೆ ವಿವರಣೆಯ ಅಕ್ಷರಸಹ ಅರ್ಥವು "ಕಹಿತನದ ಕಹಿ" ಆಗಿದೆ, ಇದರ ಇಬ್ರಿಯ ಬಳಕೆಯ ಅರ್ಥವು ಅತಿಯಾದ ಕಹಿ ಎಂದಾಗಿದೆ. [3]ಒಬ್ಬನು ಏನನ್ನು ನಂಬುತ್ತಾನೆ ಎಂಬುದರ ಒಪ್ಪಿಗೆಯನ್ನು ಪ್ರಕಟಪಡಿಸುವುದನ್ನು ನಂಬಿಗೆಯು ಒಳಗೊಂಡಿದೆ (8:37ರ ಮೇಲಿನ ಟಿಪ್ಪಣಿಯನ್ನು ನೋಡಿರಿ). [4]ಪಂಗಡಗಳ ಜಗತ್ತಿನಲ್ಲಿ ಎರಡು ವಿಷಯಗಳನ್ನು ಗಲಿಬಿಲಿ ಮಾಡಿಕೊಳ್ಳುತ್ತಾರೆ. ಮತ್ತು ದೂರವಾದ ಪಾಪಿಗಳಿಗೆ ಪಾಪಪರಿಹಾರಕ್ಕಾಗಿ ಪ್ರಾರ್ಥಿಸಲು ಹೇಳುತ್ತಾರೆ. [5]ಅಪೊಸ್ತಲ ಕೃತ್ಯಗಳು 1ರ ಪದಕೋಶದಲ್ಲಿ ನೋಡಿರಿ "ಪಶ್ಚಾತ್ತಾಪ." [6]ಆಂಡ್ರ್ಯೂ ಕೋಟೆ "ವೆಯೋಜಿನಿಂದ ನೈಜತೆಯೆಡೆಗೆ" ಸಮಯದ ಚಿನ್ಹೆಗಳು (ಫೆಬ್ರವರಿ 1971): 32. [7]Ibid. [8]Ibid.